

# ನಾನೀಗ ಹೆಣ್ಣು

ಕಾಲು ಕಾಣಿಸುತಿದ್ದ ಲಂಗಕ್ಕೆ ಏನಾಯಿತೆ;
ಚಿಕ್ಕದೆನಿಸುತಿದೆ ಚೋಲಿಗೇನಾಯಿತೆ?

‘ಓಡಾಡೊ ಕಣ್ಣಿಗೆ ಮೆರವಣಿಗೆಯಾದೆ
ಗುಡಿಸಲಿಗೆ ಹಾಕಿದ್ದು ತಿಳಿಯದೆ ನಿನಗೆ?’

ಕಣ್ಣು ಕೆಂಪೇಕೆ ಸೌದೆ ಹಸಿಯಿತ್ತೆ?
ಹುವ್ವು ಬಾಡಿದೆ ಗಿಡಕೆ ನೀರು ಸಾಲದಿತ್ತೆ?

‘ಕಣ್ಣಿನಲಿ ನೀನಿರಲು ಇರುಳೆಲ್ಲ ಜಾಗರಣೆ
ಕಾಯುವುದರಲ್ಲಿ ಹೂ ಬಾಡದೆ ನಕ್ಕೀತೆ?’

ನಗಲಾವ ದೇವರಲಿ ವರ ಬೇಡಬೇಕು
ಯಾವ ಕೆರೆನೀರು ತಂದೆರೆಯಬೇಕು?

‘ವರವೇಕೊ ಕೆರೆಯ ನೀರೇಕೊ
ಸರಿಯಾಗಿ ನೋಡು ನಾನೀಗ ಹೆಣ್ಣು.’

● ಸ. ರಘುನಾಥ
ಕಲೆ: ವಾಗೀಶ ಹೆಗಡೆ

